**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 290/2022

ಪಿಡಬ್ಲು :17 ಸಿಡಬ್ಲು :29

ಸಾಕ್ಷಿಯ ಹೆಸರು : ಡಾಃ ಚಂದ್ರಕಾಂತ ದೂಳಶೆಟ್ಟಿ

ಗಂಡನ ಹೆಸರು : ಶ್ರೀ.ಬಸವರಾಜ

ವಯಸ್ಸು : 32 ವರ್ಷ

ಉದ್ಯೋಗ : ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಕಟನೂರು

ವಾಸ್ತವ್ಯ : ಕೊಕಟನೂರು

ದಿನಾಂಕ : 02-04-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಮೇ 2019 ರಿಂದ ಈ ದಿನದವರೆಗೆ ನಾನು ಅಥಣಿ ತಾಲೂಕಿನ ಕೊಕಟನೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 14-09-2022 ರಂದು ರಾತ್ರಿ 9:30 ರ ಸಮಯದಲ್ಲಿ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದರು ಎಂದು ದಾಖಲೆಗಳಲ್ಲಿ ನಮೂದು ಇದೆ. ಆ ಸಮಯದಲ್ಲಿ ನಾನು ಕರ್ತವ್ಯದಲ್ಲಿ ಇರಲಿಲ್ಲ. ಕರ್ತವ್ಯದಲ್ಲಿದ್ದ ಶೂರ್ಶುಕಿಯರು ಗಾಯಾಳು ಸಾಬು ಬಿ. ಗಾಡಿವಡ್ಡರ ಎನ್ನುವವರಿಗೆ ಚಿಕಿತ್ಸೆ ನೀಡಿದ ಬಗ್ಗೆ ಎಮ್.ಎಲ್.ಸಿ ರಜಿಷ್ಟರನಲ್ಲಿ ನಮೂದು ಮಾಡಿದ್ದಾರೆ. ಅದರ ಆಧಾರದ ಮೇಲೆ ನಾನು ಸಾಬು ಬಿ. ಗಾಡಿವಡ್ಡರ ಇವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾದ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು

ನೀಡಿದ್ದೇನೆ. ಎಮ್.ಎಲ್.ಸಿ ರಜಿಸ್ಟರ ಪ್ರಕಾರ ಗಾಯಾಳು ಸಾಬು ಬಿ. ಗಾಡಿವಡ್ಡರ ಅವರಿಗೆ

1. ಹಣೆಯ ಮೇಲೆ ಕೂದಲಿನ ಮುಂಭಾಗದಲ್ಲಿ 2x 0.5 cm ತರಚಿದ ಗಾಯ ಮತ್ತು ನೋವಿತ್ತು.
2. ಬಲಮಂಡಿಯ ಮೇಲೆ 2 x 1.00 cm ಅಳತೆಯಲ್ಲಿ ತರಚಿದ ಗಾಯ ಮತ್ತು ನೋವಿತ್ತು.

ಈ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದವು ಎಂದು ನಾನು ಗಾಯದ ಪ್ರಮಾಣ ಪತ್ರವನ್ನು ನನ್ನ ಕೈಬರವಣಿಗೆಯಲ್ಲಿ ನೀಡಿದ್ದೇನೆ.

3. ನಮ್ಮ ಆಸ್ಪತ್ರೆಯ ವತಿಯಿಂದ ನೀಡಲಾದ ಗಾಯದ ಪ್ರಮಾಣ ಪತ್ರವನ್ನು ನಾನು ನೋಡಿದರೆ ಗುರುತಿಸುತ್ತೇನೆ. ಗಾಯದ ಪ್ರಮಾಣ ಪತ್ರವನ್ನು ನಿಪಿ–28 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–28 [ಎ] ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಿಪಿ–28 ಗಾಯದ ಪ್ರಮಾಣ ಪತ್ರದಲ್ಲಿ ಗಾಯಾಳುವನ್ನು ಪ್ರಥಮ ಬಾರಿಗೆ ವೈಧ್ಯಕೀಯ ಪ್ರಮಾಣ ಪತ್ರ ನೀಡಿದಂತಹ ವೈಧ್ಯರು ನೋಡಿ ಪರೀಕ್ಷಿಸಿರುತ್ತಾರೆ ಎಂದು ನಮೂದು ಇದೆ ಎನ್ನುವುದು ಸರಿ.

2. ಗಾಯಾಳು ಸಾಬು ಗಾಡಿವಡ್ಡರ ಅವರನ್ನು ನಾನು ನೋಡಿ ಚಿಕಿತ್ಸೆ ನೀಡಿರುವುದಿಲ್ಲ. ಈ ಪ್ರಕರಣದ ಗಾಯಾಳು ಸಾಬು ಗಾಡಿವಡ್ಡರ ಅವರಿಗೆ ನಾನೇ ನೋಡಿ ಚಿಕಿತ್ಸೆ ನೀಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ನಾನೇ ಗಾಯಾಳುವಿಗೆ ಚಿಕಿತ್ಸೆ

ನೀಡಿದ್ದರಿಂದ ನಿಪಿ–28 ನ್ನು ನಾನೇ ನೀಡಿದ್ದರೂ ಸಹ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿತರ ಪರ ಶ್ರೀ. ಎಮ್.ಎಸ್.ಪಿ ವಕೀಲರಿಂದ</u>**

ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿ ಮೋಟರಸೈಕಲನಲ್ಲಿ ಆಯತಪ್ಪಿ ಬಿದ್ದಾಗ ಅಥವಾ ಗಟ್ಟಿಯಾದ ನೆಲದ ಮೇಲೆ ಎಡವಿ ಬಿದ್ದಾಗ ನಿಪಿ–28 ರಲ್ಲಿ ಹೇಳಿರುವಂತಹ ಗಾಯಗಳು ಆಗುವ ಸಾಧ್ಯತೆ ಇದೆ ಎನ್ನುವುದು ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.